ಶ್ರೀ ಎಸ್. ಬಂಗಾರಪ್ಪ.—ಬೆಂಕಿ ಅವಾಹುತದಿಂದ ಪನತಿ ಮುಂತಾದುವುಗಳನ್ನು ಕಳೆದು ಕೊಂಡಿರತಕ್ಕ ಜನ ತಹಸೀಲ್ದಾರರು ಅಥವಾ ಡೆಪ್ಯೂಟಿ ಕಮಿಷನರನ್ನು ಪರಿಹಾರ ಕೊಡಿ ಎಂದು ಕೇಳಿದಾಗ ಒಂದೊಂದು ಸಂಸಾರಕ್ಕೆ 3 ಅಥವಾ 8 ರೂಪಾಯಿ ಕೊಡ್ಬಿರತಕ್ಕ ಸಂದರ್ಭ ಇದೆ. ಅದಕ್ಕೆ ಕಾರಣ ಹಣ ಇಲ್ಲ ಎಂದು ತಾಲ್ಲೂಕು ಆಫೀಸಿನಲ್ಲಿ ಹೇಳುತ್ತಾರೆ ಮತ್ತು 10 ಅಥವಾ 15 ರೂಪಾಯಿ ಮೇಲೆ ಕೊಡುವುದಕ್ಕೆ ನನಗೆ ಪವರ್ಸ್ ಇಲ್ಲ ಎಂದು ಡೆಪ್ಯೂಟಿ ಕಮಿಷನರು ಹೇಳುತ್ತಾರೆ. ಆದ್ದರಿಂದ ತಹಸೀಲ್ದಾರರು ಮತ್ತು ಡೆಪ್ಯೂಟಿ ಕಮಿಷನರುಗಳಿಗೆ ಹೆಚ್ಚು ಪವರ್ಸ್ ಕೊಟ್ಟು ಒಂದೊಂದು ಸಂಸಾರಕ್ಕೆ 100, 200 ರೂಪಾಯಿಗಳನ್ನು ಅಥವಾ ಅದಕ್ಕಿಂತ ಕಡಿಮೆ ಇಲ್ಲದಂತೆ ಕೊಡುವುದಕ್ಕೆ ಏನಾದರೂ ಯೋಚನೆ ಮಾಡಲಾಗಿಯೆಯೇ ? ಅಥವಾ ಆ ರೀತಿ ಪರಿಹಾರ ಕೊಡುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಸದಸ್ಯರು ಹೇಳಿದ ಹಾಗೆ 3 ಅಥವಾ 8 ರೂಪಾಯಿ ಕೊಟ್ಟ ಪ್ರಸಂಗಗಳಿಲ್ಲ. ಒಂದೊಂದು ಸಂಸಾರಕ್ಕೆ ಅಗತ್ಯವಾಗಿ ಮತ್ತು ತಕ್ಷಣ ಆಹಾರ ಮತ್ತು ಬಟ್ಟೆ ಒದಗಿಸಲು ಎಷ್ಟು ಕೊಡಬೇಕು ಎನ್ನುವದಕ್ಕೆ ಒಂದು ಸ್ಕೇಲ್ ಇದೆ, ರೂಲ್ಸ್‌ಕೂಡ ಮಾಡಿದ್ದೇವೆ 65–66–67ಕ್ಕೆ 10 ರೂಪಾಯಿಗಿಂತ ಕಡಿಮೆ ಕೊಡುವುದಕ್ಕೆ ರೂಲ್ಸ್‌ನಲ್ಲೇ ಅವಕಾಶವಿಲ್ಲ. ಇದೇ ವರ್ಷ ಸೆಪ್ಟಂಬರ್ ತಿಂಗಳಿನಲ್ಲಿ ರೆವಿನ್ಯೂ ಆಫೀಸರುಗಳಿಗೆ ಪರಿಹಾರ ಕೊಡುವ ಸಂಬಂಧದಲ್ಲಿ ಹೆಚ್ಚು ಅಧಿಕಾರವನ್ನು ಕೊಟ್ಟಿದ್ದೇವೆ. ತಹಸೀಲ್ದಾರರು ಒಂದು ಸಂಸಾರಕ್ಕೆ 50 ರೂಪಾಯಿ, ಅಸಿಸ್ಟೆಂಟ್ ಕಮಿಷನರು 100 ರೂಪಾಯಿ, ಡೆಪ್ಯೂಟಿ ಕಮಿಷನರು 250 ರೂಪಾಯಿ; ಡಿವಿಜನರ್ ಕಮಿಷನರು 500 ರೂಪಾಯಿಗಳವರೆಗೂ ಪರಿಹಾರ ಕೊಡಬಹುದೆಂದು ಅವರ ಅಧಿಕಾರ ವ್ಯಾಪ್ತಿಯನ್ನು ಹೆಚ್ಚು ಮಾಡಿದ್ದೇವೆ.

Assistant Engineer's Office, P.W.D. at Alur

87. **Sri K. P. CHIKKE GOWDA** (Sakaleshpur).—

Will the Minister for Public Works be pleased to state :—

(*a*) whether the Alur Taluk Board is repeatedly urging for the establishment of a Public Works Department. Assistant Engineer's Office at Alur by re-grouping the existing P.W.D. Sub-Division ;

(*b*) the action taken by them to form Alur Taluk itself into a P.W.D. Sub-Division ?

A.—Sri VEERENDRA PATIL (Minister for Public Works).—

(*a*) A request was made in 1965.

(*b*) There is no justification for creation of a separate Sub-Division at Alur.

ಶ್ರೀ ಕೆ. ಪಿ. ಚಿಕ್ಕೇಗೌಡ.—ಆಲೂರಿನಲ್ಲಿ ಪ್ರತ್ಯೇಕ ಉಪವಿಭಾಗವೊಂದನ್ನು ರಚಿಸುವುದರಲ್ಲಿ ಔಚಿತ್ಯವಿಲ್ಲ ಎಂದು ಉತ್ತರ ಕೊಡಲಾಗಿದೆ. ಇದಕ್ಕೆ ಕಾರಣವೇನು ?

†ಶ್ರೀ ವೀರೇಂದ್ರ ಪಾಟೀಲ್.—ಪ್ರತಿಯೊಂದು ಸಬ್‌ಡಿವಿಜನ್ ಇರತಕ್ಕ ಕಡೆ ಕನಿಷ್ಟಪಕ್ಷ 6-7 ಲಕ್ಷ ರೂಪಾಯಿಗಳ ವರ್ಕ್ ಲೋಡ್ ಇರಬೇಕು. ಅಷ್ಟು ವರ್ಕ್ ಲೋಡ್ ಆಲ್ಲಿರುವುದಿಲ್ಲವಾದ್ದರಿಂದ ಹಾಗೆ ಉತ್ತರವನ್ನು ಕೊಡಲಾಗಿದೆ.

ಶ್ರೀ ಎಚ್. ಬಿ. ಹ್ಯಾಲನಯ್ಯ.—ಇತರೆ ಎಲ್ಲಾ ಜಿಲ್ಲೆಗಳಿಗಿಂತಲೂ ಹಾಸನ ಜಿಲ್ಲೆಯಲ್ಲಿ ಪ್ರತಿ ವರ್ಷವೂ ಒಂದು ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣ ಇಲ್ಲಿ ಖರ್ಚಾಗುವುದರಿಂದ ಈ ಜಿಲ್ಲೆಯಲ್ಲಿ ಆಲೂರು ಮತ್ತು ಸಾಲಗ್ರಾಮದಲ್ಲಿ 2 ಸಬ್‌ಡಿವಿಜನ್‌ಗಳನ್ನು ಏಕೆ ತೆರೆಯಬಾರದು ?

ಶ್ರೀ ವೀರೇಂದ್ರ ಪಾಟೀಲ್.—ನಾವು ಮೊದಲು ರಸ್ತೆಗಳಿಗೂ, ಕಟ್ಟಡಗಳಿಗೂ ಮತ್ತು ಸೇತುವೆಗಳಿಗೂ ಹಣವನ್ನು ಖರ್ಚುಮಾಡುತ್ತಿದ್ದ ಪ್ರಮಾಣದಲ್ಲಿ ಈಗ ಹಣವನ್ನು ಖರ್ಚುಮಾಡುತ್ತಿಲ್ಲ ಅಂಥಾ ಅವಶ್ಯಕತೆ ಕಂಡು ಬಂದರೆ ಅದನ್ನು ಪರಿಶೀಲನೆ ಮಾಡಲಾಗುತ್ತದೆ.

ಅಧ್ಯಕ್ಷರು.—ಪ್ರಶ್ನೆ 88 ಕೇಳುವುದಕ್ಕೆ ಮಾನ್ಯ ಸದಸ್ಯರು ಸಭೆಯಲ್ಲಿ ಹಾಜರಿಲ್ಲ. ಮುಂದಿನ ಪ್ರಶ್ನೆ ಕೇಳಬಹುದು.

Conversion of Rural Communication Roads into State Fund Roads

89. **Sri B. PARAMESHWARAPPA** (Holalkere).—

Will the Minister for Public Works be pleased to state :—

(*a*) whether the Government has taken any action to convert all rural communication roads in the State into State Fund Roads as many T.D.Bs. have resolved and represented to Government that the T.D.Bs. are not capable of taking over such roads to T.D.Bs. charge for maintenance ;

(*b*) if so, the stage at which the matter stands at present ?

A.—**Sri VEERENDRA PATIL** (Minister for Public Works).—

(*a*) No.

(*b*) Does not arise in view of reply to clause (*a*) above.

ಶ್ರೀ ಬಿ. ಪರಮೇಶ್ವರಪ್ಪ.—ನನ್ನ (ಎ) ಪ್ರಶ್ನೆಗೆ ಉತ್ತರವಾಗಿ—"ಇಲ್ಲ", ಎಂದು ತಿಳಿಸಿದ್ದಾರೆ ಹಾಗಾದರೆ ಮುಂದೆ ಈ ರಸ್ತೆಗಳ ಕೆಲಸವನ್ನು ಯಾರು ಕೈಗೊಳ್ಳುತ್ತಾರೆ ?

(ಉತ್ತರವಿಲ್ಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಇಲ್ಲಿಯವರೆಗೂ ಈ ರೂರಲ್ ಕಮ್ಯುನಿಕೇಷನ್ ರಸ್ತೆಗಳಿಗೆ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿರುವುದರಿಂದ ಟಿ.ಡಿ. ಬೋರ್ಡಿನವರು ಹಣವಿಲ್ಲ ಅಂದರೆ ಮುಂದೆ ಯಾರು ಇವುಗಳನ್ನು ದುರಸ್ತಿಮಾಡಬೇಕು ?

† ವೀರೇಂದ್ರ ಪಾಟೀಲ್.—ನಾವು ಈಗಾಗಲೆ ಕ್ರಮವನ್ನು ಕೈಗೊಂಡು ಅವುಗಳನ್ನು ಟಿ.ಡಿ.ಬಿ. ಗೆ ವಹಿಸಿದ್ದೇವೆ. ಅವರು ಅವುಗಳನ್ನು ತಕ್ಕಮಟ್ಟಿಗೆ ಉತ್ತಮ ಸ್ಥಿತಿಯಲ್ಲಿಡುವುದಕ್ಕೆ ಏರ್ಪಾಡು ಮಾಡುತ್ತಾರೆ.

ಶ್ರೀ ಎಂ. ನಾಗಪ್ಪ.—ಹೈದರಾಬಾದು ಕರ್ನಾಟಕದ ಭಾಗಗಳಲ್ಲಿರುವ ರೋಡುಗಳ ಪರಿಸ್ಥಿತಿಯನ್ನು ನೋಡಿ ಸರಕಾರಕ್ಕೆ ವರದಿ ಮಾಡಲು ಅಲ್ಲಿ ಒಂದು ಕಮಿಷನ್ ಎಂದು ಮಾಡಿದ್ದರು, ಅವರ ವರದಿ ಈಗಾಗಲೇ ಸರಕಾರಕ್ಕೆ ಬಂದಿರಬಹುದು. ಅದರಂತೆ ಹೈದರಾಬಾದು ಕರ್ನಾಟಕ ಪ್ರದೇಶದಲ್ಲಿರುವ ರಸ್ತೆಗಳು ಬಹು ಹೀನಸ್ಥಿತಿಯಲ್ಲಿವೆ. ಇದರ ಬಗ್ಗೆ ದುರುಸ್ತುಮಾಡಲು ತಕ್ಕ ಕ್ರಮ ತೆಗೆದುಕೊಳ್ಳುವುದು ಯುಕ್ತವಾಗಿದೆ ಎಂದು ತಾವು ಒಪ್ಪುವುದಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಇದರಲ್ಲಿ ಹೈದರಾಬಾದು ಕರ್ನಾಟಕ ಇತರ ಭಾಗದ ಕಡೆ ಎಂದು ನಾವು ನೋಡಿ ರಸ್ತೆಗಳನ್ನು ತೆಗೆದುಕೊಳ್ಳುತ್ತಿಲ್ಲ. ಇಲ್ಲಿರುವ ಪ್ರಶ್ನೆ ರೂರಲ್ ಕಮ್ಯೂನಿಕೇಷನ್ಸ್ ರೋಡುಗಳ ಪ್ರಶ್ನೆ. ಗ್ರಾಮಾಂತರ ಪ್ರದೇಶಗಳಲ್ಲಿರುವ ರಸ್ತೆಗಳನ್ನು ಅಭಿವೃದ್ಧಿವಡಿಸಲು ಸರಕಾರ ಈಗಾಗಲೇ ಸುಮಾರು 6,37·54 ಸಾವಿರ ರೂಪಾಯಿಗಳಷ್ಟು ಖರ್ಚು ಮಾಡಿದೆ ಮತ್ತು ಇದರಿಂದ ಸುಮಾರು 14,681 ಮೈಲಿಗಳಷ್ಟು ರೋಡುಗಳ ಕೆಲಸವನ್ನು ಇಲ್ಲಿಯವರೆಗೆ ಮಾಡಲಾಗಿದೆ. ಅಲ್ಲದೆ ಸಾಕಷ್ಟು ಹಳ್ಳಿಗಾಡಿನ ರಸ್ತೆಗಳನ್ನು ದುರುಸ್ತು ಮಾಡಲು ಗ್ರಾಮಾಂತರ ಪ್ರದೇಶಗಳಲ್ಲಿ ಅಭಿವೃದ್ಧಿ ಬಗ್ಗೆ ಹೆಚ್ಚು ಆಸಕ್ತಿ ಇರುವ ತಾಲ್ಲೂಕಾ ಬೋರ್ಡ್‌ಗಳವರು ಇಂತಹ ರಸ್ತೆಗಳನ್ನು ಅವರೇ ತೆಗೆದುಕೊಂಡು ಮಾಡಬೇಕು ಎಂದು ಅವರಿಗೇ ಇದರ ಎಲ್ಲ ಜವಾಬುದಾರಿಯನ್ನು ವಹಿಸಲಾಗಿದೆ.